
ಬಾಕ್ಸಿಂಗ್ ರಿಂಗ್‌ನಲ್ಲಿ ಭಾರತದ ಗರಿಮೆ ಹೆಚ್ಚಿಸಿದ ಅಸ್ಸಾಂನ ಲವ್ಲಿನಾ

ಭಾವ. ಅವರಿಗೆಲ್ಲ ಹೀಗೆ ಅನಿಸಲು ಸಾಮಾಜಿಕ–ಸಾಂಸ್ಕೃತಿಕ ಕಾರಣಗಳಿವೆ.

ಕೆಲಸ ಹುಡುಕಿಕೊಂಡು ವಲಸೆ ಹೋದ ಈಶಾನ್ಯ ಭಾರತದವರನ್ನು ದೇಶದ ಉದ್ದಗಲದಲ್ಲೂ ವಾರೆಗಣ್ಣಿನಿಂದ ನೋಡಿರುವುದೇ ಹೆಚ್ಚು. ಅಲ್ಲಿನ ಸಾಮಾಜಿಕ ಬಿಕ್ಕಟ್ಟುಗಳು, ಆಂತರಿಕ ಸಮಸ್ಯೆ ನೋಡಿನೋಡಿ ರೋಸಿಹೋಗಿರುವವರೂ ಕಡಿಮೆಯೇನಿಲ್ಲ. ಹಸಿರು ಹೊದ್ದ ಪರ್ವತಗಳು, ಅಲ್ಲಲ್ಲಿ ಮಂಜು ಸೋಕಿದ ಪ್ರಕೃತಿ ಸೌಂದರ್ಯ, ಗದ್ದೆಗಳಲ್ಲಿ ಸ್ಕರ್ಟ್ ಹಾಕಿ ನಿಂತ ಸಣ್ಣಕಣ್ಣಿನ ಹೆಣ್ಣುಮಕ್ಕಳ ದೊಡ್ಡ ಮನಸ್ಸು ಇವೆಲ್ಲವೂ ಅಸಂಖ್ಯ ಫೋಟೊಗ್ರಾಫರ್‌ಗಳ ಫ್ರೇಮುಗಳಿವೆ ಸಿಕ್ಕಿವೆ. ನೋಡಲು ಮನೋಹರವಾದ ಅಲ್ಲಿನ ಪ್ರಕೃತಿಯ ಮಡಿಲಲ್ಲಿ ವಾಸಿಸುವವರ ಆಂತರಿಕ ಸಂಕಟಗಳನ್ನು ಬಲ್ಲವರೇ ಬಲ್ಲರು.

ಕರ್ಮ ಪಲಿಜೋರ್ ಎಂಬ ಹಿರಿಯ ಪತ್ರಕರ್ತರೊಬ್ಬರು ಈಶಾನ್ಯ ಭಾರತದಲ್ಲಿ ಅಡ್ಡಾಡಿ, ತಮ್ಮ ಅನುಭವ ದಾಖಲಿಸಿದ್ದನ್ನು ನಿಯತಕಾಲಿಕೆಯೊಂದು ಉಲ್ಲೇಖಿಸಿತ್ತು. ಸೈಕಲ್ ಏರಿ ಹೊರಟ ಅವರ ಕಣ್ಣಿಗೆ ತುಂಡು ಜಾಗದಲ್ಲೇ ಫುಟ್‌ಬಾಲ್ ಆಡುವ ಹೈಕಳು ಕಂಡಿದ್ದರು. ಬೂಟು ತೊಡದ ಪಾದಗಳ ಲವಲವಿಕೆಯ ಚಲನೆಯನ್ನು ನೋಡುತ್ತಿದ್ದಾಗಲೇ, ‘ಗೋಲ್’ ಎಂಬ ಸಾರ್ಥಕ್ಯದ ಕೂಗು. ಥಟ್ಟನೆ ಎಲ್ಲರೂ ಪರಸ್ಪರ ಒಂದಾಗಿ ಖುಷಿಯ ದನಿ ಹೊಮ್ಮಿಸಿ, ಮತ್ತೆ ಫುಟ್‌ಬಾಲ್ ಅನ್ನು ಹಿಡಿತಕ್ಕೆ ಪಡೆಯುವ ಚಲನಶೀಲತೆಯಲ್ಲಿ ತೊಡಗಿದ್ದನ್ನು ಅವರು ಗಮನಿಸಿದರು. ಭತ್ತದ ಗದ್ದೆಗಳಲ್ಲಿ ಸ್ಕರ್ಟ್ ತೊಟ್ಟು ನಿಂತ ಹುಡುಗಿಯರ ತಾದಾತ್ಮ್ಯವೂ ಅವರಿಗೆ ಸುಖದ ಕ್ಷಣವೇ. ಸಮಸ್ಯೆಗಳ ಸಿಕ್ಕುಗಳನ್ನು ಬಿಡಿಸುತ್ತಲೇ ಬದುಕಿನ ಸಣ್ಣ ಸಣ್ಣ ಸುಖಗಳನ್ನು ಅವರು ಮೊಗೆದುಕೊಳ್ಳುವುದರಲ್ಲೇ ಮಹತ್ವಾಕಾಂಕ್ಷೆಯ ಬೀಜವೊಂದು ಮೊಳೆಯುತ್ತದೆ ಎಂದು ಅವರಿಗೆ ಅನ್ನಿಸಿದೆ. ಅಲ್ಲಿ ಮೇರಿ ಕೋಮ್ ಎಂದರೆ ಸಾಕು, ಪರ್ವತಗಳೆಲ್ಲ ಆ ಹೆಸರನ್ನು ಪ್ರತಿಧ್ವನಿಸುವಂತಹ ವಾತಾವರಣ ಮೂಡಿದೆ. ಈಗ ಲವ್ಲಿನಾ, ಚಾನು ಹೆಸರುಗಳೂ ಅದೇ ಸಾಲಿಗೆ ಸೇರಿಕೊಂಡಂತಾಗಿದೆಯಷ್ಟೆ. ಫುಟ್‌ಬಾಲ್ ವರಸೆಗಳ ಬಗೆಗೆ ಅಧಿಕಾರಯುತವಾಗಿ ಮಾತನಾಡುವವರು ಎದೆಯುಬ್ಬಿಸಲು ಬೈಚುಂಗ್ ಭುಟಿಯಾ ನಾಮಬಲವಿದೆ.

ಕಾಡಿನ ಹಾದಿಯಲ್ಲಿ ಪಥವ ಸೃಷ್ಟಿಸಿಕೊಳ್ಳುವ ಅವರ ನೋಟದಲ್ಲೇ ಭವಿಷ್ಯದ ದಾರಿ ಸೃಷ್ಟಿಸಿಕೊಳ್ಳುವ ‘ದರ್ಶನ’ ಇರಬಹುದೇನೋ ಎನ್ನುವುದು ಕರ್ಮ ಪಲಿಜೋರ್ ಅನುಭವನುಡಿ.

ಒಂದು ಹಂತಕ್ಕೆ ಏರುವವರೆಗೆ ಅಲ್ಲಿಯೂ ಬಾಕ್ಸರ್‌ಗಳಿಗೆ, ವೇಟ್‌ಲಿಫ್ಟರ್‌ಗಳಿಗೆ ಮೂಲಸೌಕರ್ಯದ ಕೊರತೆಗಳು ಮೊದಲೆಲ್ಲ ಕಾಡಿದ್ದವು. ಮೇರಿ ಕೋಮ್ ಪ್ರಭಾವಳಿ ಮೂಡಿದ ಮೇಲೆ ನೂರು ನೂರು ಮೇರಿ ಕೋಮ್‌ಗಳನ್ನು ತಯಾರಿಸುವ ಮನಸ್ಸುಗಳು ಹುಟ್ಟಿವೆ. ಅಲ್ಲಿ ಪೋಷಕರು ಮಕ್ಕಳನ್ನು ತಮ್ಮ ಸಮಕ್ಕೆ ದುಡಿಯಲು ಹಚ್ಚುವುದರ ಜತೆಗೇ ತಂತಮ್ಮ ಕನಸುಗಳಿಗೆ ರೆಕ್ಕೆ ಮೂಡಿಸುವುದನ್ನೂ ಕಲಿಸುತ್ತಿದ್ದಾರೆ. ಬಹು ಚಟುವಟಿಕೆಗಳಲ್ಲಿ ಸೈ ಎನ್ನಿಸಿಕೊಳ್ಳುವುದನ್ನು ಆನುವಂಶೀಯವಾಗಿ ಕಲಿತಿರುವ, ಸಂಸಾರದ ಭಾರದ ನೊಗಕ್ಕೆ ಹೆಗಲು ಕೊಟ್ಟವರ ಯಾದಿಯಲ್ಲಿ ಸದಾ ನುಗ್ಗಿ ನಿಲ್ಲುವ ಹೆಣ್ಣುಕಣ್ಣುಗಳು ಅಲ್ಲಿ ಹೊಳೆಯಲು ಇದೇ ಕಾರಣ ಎನ್ನುವುದು ಅನೇಕರ ವಿಶ್ಲೇಷಣೆ.

ಆರ್ಚರಿಯಲ್ಲಿ ತರುಣ್‌ದೀಪ್ ರಾಯ್, ಹಾಕಿಯಲ್ಲಿ ಲಾಲ್‌ರೆಂಸಿಯಾಮಿ, ಸುಶೀಲಾ ಚಾನು ಹಾಗೂ ಶಾಂಗ್ಲಾಕ್‌ಪಾಮ್ ನೀಲಕಂಠ, ಜೂಡೊದಲ್ಲಿ ಸುಶೀಲಾ ಲಿಕ್ಮಾಬಂ ಇವರೆಲ್ಲ ಈಶಾನ್ಯ ಭಾರತದವರೇ. ಈ ಸಲ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಅರ್ಹತೆ ಪಡೆದವರು ಇವರು. ಇವರಲ್ಲಿ ತರುಣ್‌ದೀಪ್ ಹಾಗೂ ಶಾಂಗ್ಲಾಕ್‌ಪಾಮ್ ನೀಲಕಂಠ ಪುರುಷರು. ಮೇರಿ ಕೋಮ್ ಸೇರಿದಂತೆ ಉಳಿದವರೆಲ್ಲ ಮಹಿಳೆಯರು.

ಅರುಣಾಚಲಪ್ರದೇಶ, ಮಣಿಪುರ, ಮಿಜೊರಾಂ, ಮೇಘಾಲಯ, ನಾಗಾಲ್ಯಾಂಡ್, ಸಿಕ್ಕಿಂ ಇವೆಲ್ಲವೂ ಈಶಾನ್ಯ ಭಾರತಕ್ಕೆ ಸೇರುತ್ತವೆ. 2017ರಲ್ಲಿ ಒಂದು ಅಂಕಿಅಂಶವನ್ನು ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ ಅರ್ಥಾತ್ ಸಾಯ್) ನೀಡಿತ್ತು. ಅದರ ಪ್ರಕಾರ, ಆ ವರ್ಷದವರೆಗೆ ‘ಸಾಯ್’ನಲ್ಲಿ 14,000 ಪ್ರತಿಭಾವಂತ ಅಥ್ಲೀಟ್‌ಗಳು ಹಾಗು ಸ್ಪರ್ಧಿಗಳು ಈ ಭಾಗದಿಂದ ತರಬೇತಿ ಪಡೆದಿದ್ದಾರೆ. ಆ ಪೈಕಿ ನಾಲ್ಕು ಸಾವಿರ ಹೆಣ್ಣುಮಕ್ಕಳು. ಅವರಲ್ಲಿ 910 ಹುಡುಗಿಯರು ತಮ್ಮ ಪ್ರದೇಶಕ್ಕೆ ಸೇರಿದ ‘ಸಾಯ್’ ಕೇಂದ್ರಗಳಲ್ಲೇ ತರಬೇತಿ ಪಡೆದಿರುವುದು ವಿಶೇಷ. 27 ವಿವಿಧ ಕ್ರೀಡೆ–ಸ್ಪರ್ಧೆಗಳಲ್ಲಿ ಅವರೆಲ್ಲ ಪಳಗಿದವರು. ಇಂಫಾಲ್‌ನಲ್ಲಿ ‘ಸಾಯ್’ನ ಫುಟ್‌ಬಾಲ್ ಅಕಾಡೆಮಿಯೂ ಇದೆ. ಗುವಾಹಟಿಯಲ್ಲಿ ‘ಸಾಯ್’ನದ್ದೇ ಆರ್ಚರಿ ಅಕಾಡೆಮಿ ಸ್ಥಾಪಿಸಬೇಕೆಂಬ ಒತ್ತಾಸೆ ವರ್ಷಗಳಿಂದ ಇದ್ದುದನ್ನು ಕಂಡಿದ್ದೇವೆ. ಈಶಾನ್ಯ ಭಾರತದ ರಾಜ್ಯಗಳ ಶೇ 82ಕ್ಕೂ ಹೆಚ್ಚು ಪೋಷಕರು ದೈಹಿಕ ಶಿಕ್ಷಣ ಕಾಟಾಚಾರಕ್ಕೆ ಇರಬಾರದು ಎಂದು ಭಾವಿಸಿದ್ದಾರೆ. ವಿದ್ಯಾರ್ಥಿಗಳಲ್ಲೂ ಕ್ರೀಡಾ ಚಟುವಟಿಕೆ ಕುರಿತು ಗಂಭೀರ ಒಳನೋಟ ಮೂಡಲು ಇದೇ ಕಾರಣ.

ಟೊಮೆಟೊವನ್ನು ಆಲದಮರದ ಎಲೆಗಳಿಂದ ಕಟ್ಟಿ, ನಾಜೂಕಾಗಿ ಹಿಸುಕದೆ ಒಬ್ಬರಿಂದ ಒಬ್ಬರಿಗೆ ಎಸೆಯುತ್ತಾ ಆಡುವ ‘ಥೋಪ್ ಖೇಲ್’ ಎಂಬ ಪ್ರಾಚೀನ ಕ್ರೀಡೆ ಈಶಾನ್ಯ ಭಾರತದ ಬುಡಕಟ್ಟು ಜನಾಂಗದವರಲ್ಲಿ ಈಗಲೂ ಚಾಲ್ತಿಯಲ್ಲಿದೆ. ಕಣ್ಮುಚ್ಚಿದವರು ಯಾರೋ ಉರುಳಿಬಿಟ್ಟ ಚೆಂಡನ್ನು ಹಿಡಿದು, ರಂಧ್ರದೊಳಕ್ಕೆ ಹಾಕುವ ಚಾಣಾಕ್ಷ ಕ್ರೀಡೆ ‘ಕೋಚು’ ಕೂಡ ಪ್ರಾಚೀನ ಕ್ರೀಡೆಗಳಲ್ಲಿ ಜನಪ್ರಿಯ. ಇಂತಹ ಹಳೆಯ ಆಟಗಳು ಈ ಭಾಗದ ಜನರ ಸಂಸ್ಕೃತಿಯ ಭಾಗವೂ ಹೌದು. ಅವು ಏಕಾಗ್ರತೆ, ಚಾಣಾಕ್ಷತನ, ಛಲವನ್ನು ರೂಢಿಸಿಕೊಳ್ಳಲು ಸಹಕಾರಿ ಎಂದು ಪೂರ್ವಜರು ಭಾವಿಸಿದ್ದರು. ಅದರ ಮುಂದುವರಿದ ಭಾಗವಾಗಿ ಆಧುನಿಕ ಕ್ರೀಡೆ–ಸ್ಪರ್ಧೆಗಳಿಗೆ ಇಲ್ಲಿನ ಮಕ್ಕಳು ಅಣಿಯಾಗುತ್ತಿದ್ದಾರೆ. ಮಾದಕದ್ರವ್ಯ ವ್ಯಸನ, ಕಳ್ಳತನ–ಸುಲಿಗೆಯಂಥ ಅಡ್ಡದಾರಿಯನ್ನು ಮಕ್ಕಳು ಹಿಡಿಯದೇ ಇರಲು ಕ್ರೀಡೆಗಳು ಸಹಕಾರಿ ಎಂಬ ಭಾವನೆ ಅನೇಕ ಪೋಷಕರಲ್ಲಿ ಇದೆ. ಇವೆಲ್ಲದರ ಮೊತ್ತವೇ ಒಲಿಂಪಿಕ್ಸ್‌ನಲ್ಲಿ ಪದಕಗಳ ಹೊಳಪನ್ನು ನಾವು ನೋಡುತ್ತಿರುವುದು.

ಈ ವಯಸ್ಸಿನಲ್ಲೂ ಬಾಕ್ಸಿಂಗ್ ಗ್ಲೌಸ್ ತೊಡುವ ಮೇರಿ ಕೋಮ್ ಐದು ಸಲ ‘ವಿಶ್ವ ಅಮೆಚ್ಯೂರ್ ಬಾಕ್ಸಿಂಗ್ ಚಾಂಪಿಯನ್’ ಎನಿಸಿಕೊಂಡವರು. ಬಾಕ್ಸರ್ ಸರಿತಾದೇವಿ 2014ರ ಗ್ಲಾಸ್‌ಗೌ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದವರು. ಅದೇ ಕ್ರೀಡಾಕೂಟದಲ್ಲಿ ವೇಟ್‌ಲಿಫ್ಟರ್ ಸಂಚಿತಾ ಚಾನು ಚಿನ್ನದ ಪದಕ ಕೊರಳಿಗೆ ಧರಿಸಿ ಬೀಗಿದ್ದರು. ಅರ್ಜುನ ಪ್ರಶಸ್ತಿ ಪುರಸ್ಕೃತೆ ಜಯಂತ ತಾಲೂಡ್ಕರ್ ಚಿನ್ನದ ನಗೆ ಬೀರಿದ ಪ್ರತಿಭಾವಂತೆ. ಇವರೆಲ್ಲ ಈಶಾನ್ಯ ಭಾರತದ ಕ್ರೀಡಾ ಸಂಸ್ಕೃತಿಯ ಹೆಮ್ಮೆಯ ರಾಯಭಾರಿಗಳಂತೆ ಕಾಣುತ್ತಾರೆ.

ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಈಶಾನ್ಯ ಭಾರತದವರ ಪಾಲು ಶೇ 3.7 ಅಷ್ಟೆ. ಪದಕಗಳ ಬೇಟೆಯಲ್ಲಿ ನಿರತವಾಗಿರುವ ಹೆಣ್ಣುಮಕ್ಕಳ ಸಣ್ಣಕಣ್ಣುಗಳು ಕಟ್ಟಿಕೊಡುವ ಕ್ರೀಡಾ ಸಂಕಥನಗಳು ಮಾತ್ರ ರೋಚಕ.

ಪ್ರತಿಕ್ರಿಯಿಸಿ: feedback@sudha.com